## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **885(931)**
ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 15.12.2025.
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರೌಢ ಶಿಕ್ಷಣದಲ್ಲಿ ಶಾಲೆ ತೊರೆಯುತ್ತಿರುವ ಮಕ್ಕಳಲ್ಲಿ ರಾಜ್ಯವು ಅಗ್ರಸ್ಥಾನದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2024-25ನೇ ಸಾಲಿನ UDISE+REPORT ನಲ್ಲಿರುವಂತೆ ಪ್ರೌಢಶಿಕ್ಷಣದಲ್ಲಿ ಶಾಲೆ ತೊರೆದಿರುವ ಮಕ್ಕಳ ಸಂಖ್ಯೆ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಬಂದಿದ್ದಲ್ಲಿ, ಮಕ್ಕಳು ಶಾಲೆ ತೊರೆಯಲು ಕಾರಣವಾದ ಅಂಶಗಳನ್ನು ಸರ್ಕಾರದ ಮನಗಂಡಿದೆಯೇ; | 2024-25ನೇ ಸಾಲಿನ ದಾಖಲಾತಿಯನ್ನು 2025-26ನೇ ಸಾಲಿನ ದಾಖಲಾತಿಗೆ ಹೋಲಿಕೆ ಮಾಡಿದಾಗ 8ನೇ ತರಗತಿಯಲ್ಲಿ ದಾಖಲಾತಿಯಲ್ಲಿ ಹೆಚ್ಚಳವಾಗಿರುವುದು ಕಂಡುಬಂದಿದೆ. |
| ಇ) | ಹಾಗಿದ್ದರೆ, ಮಕ್ಕಳು ಶಾಲೆ ತೊರೆಯದಂತೆ ಸರ್ಕಾರ ಕೈಗೊಳ್ಳಬಹುದಾದ ಸುಧಾರಣಾ ಕ್ರಮಗಳೇನು? | ಪ್ರತಿ ವರ್ಷ ಸಮೀಕ್ಷೆಯಿಂದ ಗುರುತಿಸಲಾದ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ವಿವಿಧ ಕಾರ್ಯತಂತ್ರಗಳ ಮೂಲಕ ಶೈಕ್ಷಣಿಕ ಮುಖ್ಯವಾಹಿನಿಗೆ ತರಲಾಗುತ್ತಿದೆ.<br><br>**ಸರ್ಕಾರಿ ಶಾಲೆಯ ಮಕ್ಕಳು ಶಾಲೆ ತೊರೆಯದಂತೆ ಈ ಕೆಳಕಂಡಂತೆ ಕ್ರಮಕೈಗೊಳ್ಳಲಾಗಿದೆ.**<br><br>1. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 182 ಶಾಲೆಗಳನ್ನು ಉನ್ನತೀಕರಿಸಲಾಗಿದೆ.<br>2. LKG, UKG ಪ್ರಾರಂಭಿಸಿದ್ದು ದಾಖಲಾತಿ ಹೆಚ್ಚಳಕ್ಕೆ ಆಂಗ್ಲ ಭಾಷೆಯನ್ನು ಒಂದು ವಿಷಯವಾಗಿ ಕಲಿಕೆಯನ್ನು ಮಾಡಲಾಗುತ್ತಿದೆ.<br>3. LKG ಯಿಂದ ಪ್ರಾರಂಭಿಸಿ ಪಿಯುಸಿ ವರೆಗಿನ ಶಾಲೆಯನ್ನು ಒಂದೇ ಸುರೀನಡಿಯಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದಕ್ಕೆ KPS ಶಾಲೆಗಳನ್ನು ಆರಂಭಿಸಲಾಗಿದೆ. ಪ್ರಸ್ತುತ 309 ಕೆಪಿಎಸ್ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಇನ್ನೂ 474 ಶಾಲೆಗಳು ಶೀಘ್ರದಲ್ಲೇ ಪ್ರಾರಂಭವಾಗಲಿವೆ. |

| | | |
|---|---|---|
| | | 4. ಉಚಿತ ಸಮವಸ್ತ್ರ, ಪಠ್ಯಪುಸ್ತಕ, ಶೂ-ಸಾಕ್ಸ್ ಬಿಸಿಯೂಟ, ಕ್ಷೀರಭಾಗ್ಯ, ಮೊಟ್ಟೆ / ಬಾಳೆಹಣ್ಣು, ರಾಗಿ ಮಾಲ್ಟ್ ಇತ್ಯಾದಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ.<br>5. ತಾಲ್ಲೂಕು ಕಚೇರಿಯ ಇ.ಸಿ.ಓ ಗಳನ್ನು ಹಾಜರಾತಿ ಪ್ರಾಧಿಕಾರಗಳನ್ನಾಗಿ ಮಾಡಿ ಮಕ್ಕಳು ಸತತವಾಗಿ ಶಾಲೆಯಲ್ಲಿ ಉಳಿದುಕೊಳ್ಳುವಂತೆ ಕ್ರಮವಹಿಸಿದೆ.<br>6. ಸಮೀಕ್ಷೆನಡೆಸಿ ಶಾಲೆ ಬಿಟ್ಟವರನ್ನು ಶಾಲೆಗೆ ಮರಳಿ ದಾಖಲಿಸಲಾಗುತ್ತದೆ. ಅಗತ್ಯವಿದ್ದಲ್ಲಿ ವಸತಿ ಶಾಲೆಗಳನ್ನು 3 /6 ತಿಂಗಳ ಅವಧಿಗೆ ನಡೆಸಲಾಗುತ್ತಿದೆ.<br>7. ಆನಂದದಾಯಕ ಕಲಿಕೆಯ ಆಧಾರದ ಮೇಲೆ ಸಮಗ್ರ ಹಾಗೂ ನವೀನ ಬೋಧನಾ-ಕಲಿಕಾ ಕಾರ್ಯಕ್ರಮಗಳ ಅನುಷ್ಠಾನ ವಾಗುತ್ತಿದೆ.<br>8. ಎಲ್ಲಾ ಸರ್ಕಾರಿ ಶಾಲೆಗಳಿಗೆ ಶಾಲಾ ನಿರ್ವಹಣಾ ವೆಚ್ಚ. ಅನುದಾನ, ಕ್ರೀಡೆ ಗ್ರಂಥಾಲಯ ವ್ಯವಸ್ಥೆ ನೀಡಿದೆ. ವೃತ್ತಿ ಕೌಶಲ್ಯದ ತರಬೇತಿ ಯನ್ನೂ ಸಹ ನೀಡಲಾಗುತ್ತಿದೆ.<br>9. 2024-25 ರಲ್ಲಿ 16 ರಿಂದ 19 ವಯೋಮಾನದ ಶಾಲೆಯಿಂದ ಹೊರಗುಳಿದ ಹಾಗೂ ದಾಖಲಾದ ಮಕ್ಕಳಿಗೆ ರಾಷ್ಟ್ರೀಯ ಮುಕ್ತ ಶಾಲಾ ವ್ಯವಸ್ಥೆಯ (NIOS) ಮೂಲಕ ಪರೀಕ್ಷೆಗೆ SSLC ಪೂರ್ಣಗೊಳಿಸಲು ಅವಕಾಶ ನೀಡಿದೆ. |

ಸಂಖ್ಯೆ: ಇಪಿ 116 ಎಸ್‌ಓಹೆಚ್ 2025

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು